ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 26-9-2016

## ಪತ್ರಿಕಾ ಪ್ರಕಟಣೆ

# ಸಚಿವರಾಗಿ ಕೆ.ಜೆ. ಜಾರ್ಜ್ ಪ್ರಮಾಣ ವಚನ

ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)

ಕೆ. ಜೆ. ಜಾರ್ಜ್ ಅವರು ಇಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಮೂಲಕ ಮರಳಿ ಸಚಿವ ಸಂಪುಟವನ್ನು ಸೇರಿದರು. ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ಗೋಪ್ಯತಾ ಪ್ರಮಾಣವಚನ ಕಾರ್ಯಕ್ರಮದಲ್ಲಿ ರಾಜ್ಯಪಾಲ ವಜೂಭಾಯಿ ವಾಲಾ ಅವರಿಂದ ಗೋಪ್ಯತಾ ಪ್ರಮಾಣವನ್ನು ಸ್ವೀಕರಿಸಿದರು.

ಇಂದು ಬೆಳಿಗ್ಗೆ 10-15 ಗಂಟೆಗೆ ನಡೆದ ಪ್ರಮಾಣವಚನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರಾದ ಜಿ. ಪರಮೇಶ್ವರ್, ಡಿ. ಕೆ. ಶಿವಕುಮಾರ್, ರಾಮಲಿಂಗಾ ರೆಡ್ಡಿ, ಆರ್. ರೋಷನ್ ಬೇಗ್, ತನ್ವೀರ್ ಸೇಠ್, ಯು.ಟಿ. ಖಾದರ್, ಹೆಚ್. ಎಸ್. ಮಹಾದೇವ್ ಪ್ರಸಾದ್, ಪ್ರಿಯಾಂಕ ಖರ್ಗೆ, ರಾಜ್ಯಸಭಾ ಸದಸ್ಯರಾದ ಕುಪೇಂದ್ರ ರೆಡ್ಡಿ, ಲೋಕಸಭಾ ಸದಸ್ಯರಾದ ಕೆ. ಹೆಚ್. ಮುನಿಯಪ್ಪ, ಡಾ. ಎಂ. ವೀರಪ್ಪ ಮೊಯಿಲಿ, ಶಾಸಕರಾದ ಎಸ್. ಆರ್. ಪಾಟೀಲ್, ಎನ್. ಎ. ಹ್ಯಾರಿಸ್, ಎಸ್. ಟಿ. ಸೋಮಶೇಖರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್ ಅವರು ಸೇರಿದಂತೆ ಹಿರಿಯ ರಾಜಕೀಯ ಗಣ್ಯರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದು, ಕೆ.ಜೆ. ಜಾರ್ಜ್ ಅವರನ್ನು ಅಭಿನಂದಿಸಿದರು

ಹೆಚ್‌ಕೆ:ಪೂರ್ಣಿಮ:ಜಿಪಿಆರ್.

# ಅಂಗವಿಕಲರ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ರಾಜ್ಯ ಪ್ರಶಸ್ತಿ

ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)

ಡಿಸೆಂಬರ್ 3 ರಂದು ಆಚರಿಸುವ "ವಿಶ್ವ ಅಂಗವಿಕಲರ ದಿನಾಚರಣೆ" ಯಂದು ಅಂಗವಿಕಲರ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ 8 ಸಂಸ್ಥೆಗಳಿಗೆ, ವಿಶಿಷ್ಟ ಸಾಧನೆ ಗೈದಿರುವ 2 ಸಂಸ್ಥೆಗಳಿಗೆ ಮತ್ತು 15 ವ್ಯಕ್ತಿಗಳಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲು ಪ್ರತಿ ವರ್ಷದಂತೆ ಈ ಸಾಲಿನಲ್ಲಿಯೂ ಸಹ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಉದ್ದೇಶಿಸಿದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ವಿಕಲಚೇತನರಿಗಾಗಿ ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ವತಿಯಿಂದ ನಿರ್ವಹಿಸುತ್ತಿರುವ ವಿಶೇಷ ಶಾಲೆಗಳಲ್ಲಿ 15 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿರುವ/ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರುಗಳಿಗೂ ಸಹ 5 ರಾಜ್ಯ ಪ್ರಶಸ್ತಿಗಳನ್ನು ನೀಡುತ್ತಿದೆ.

ಆಸಕ್ತರು ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಇಲಾಖೆಯ ಈ ಕೆಳಗಿನ ವೆಬ್‌ಸೈಟ್‌ನಲ್ಲಿಯೂ ಸಹ ಪಡೆಯಬಹುದಾಗಿದೆ. (http://www.welfareofdisabled.kar.nic.in) ಇಲ್ಲಿಂದ ಪಡೆದು ಪೂರ್ಣವಾಗಿ ಭರ್ತಿಮಾಡಿದ ಅರ್ಜಿಗಳನ್ನು ಅಕ್ಟೋಬರ್ 14 ರೊಳಗೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ನಿರ್ದೇಶನಾಲಯಕ್ಕೆ ನೇರವಾಗಿ ಸಲ್ಲಿಸಬಾರದೆಂದು ಒಂದು ವೇಳೆ ಹಾಗೇನಾದರೂ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

# State Award for Differently Abled Citizens

Bengaluru, September 26, (Karnataka Information)

*The Department for Empowerment of Differently Abled and Senior Citizens, has been honoring eight Institutions and special Awards for the two Institutions for the exemplary work in the field of Welfare of Disabled. Likewise fifteen awards for the Individuals and five awards to the outstanding teachers who have served/serving in*

*the Non-Government Organization or Government schools for the past 15 years in Special School every year.*

*For the year 2016-17 applications are invited from the interested eligible candidates/organizations. Application forms may be obtained from the office of the Deputy Director, Department of Women & Child Development of the respective districts, or can be downloaded from the department's website, (http://www.welfare of disabled.kar.nic.in).*

*The last date for submitting filled application forms is 14-10-2016, applications received after due date will not be entertained. The filled application forms should be submitted to the office of the District Disabled Welfare Officer, Deputy Director's Office, Department of Women and Child Development of the concerned district. Applications submitted directly to the Directorate, Bengaluru will not be accepted.*

hk/gpr

## ಕಿರಿಯ ಸಹಾಯಕರ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದಲ್ಲಿನ 91 ಕಿರಿಯ ಸಹಾಯಕರ ಹುದ್ದೆಗಳ (ಉಳಿಕೆ ಮೂಲವೃಂದ–89 ಹುದ್ದೆಗಳು ಮತ್ತು ಹೈದರಾಬಾದ್ ಕರ್ನಾಟಕ ವೃಂದ – 02 ಹುದ್ದೆಗಳು) ಅಂತಿಮ ಆಯ್ಕೆಪಟ್ಟಿಯನ್ನು ಸೆಪ್ಟೆಂಬರ್ 23 ರಂದು ಆಯೋಗದ ಅಂತರ್ಜಾಲ ತಾಣ http://kpsc.kar.nic.in ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಹೆಚ್‌ಕೆ::ಜಿಪಿಆರ್.

## ಹಿರಿಯ ಸಹಾಯಕರ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದಲ್ಲಿನ 31 (23+08) ಹಿರಿಯ ಸಹಾಯಕರ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲ ತಾಣ http://kpsc.kar.nic.in ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಹೆಚ್‍ಕೆ:ಜಿಪಿಆರ್.

## ಶುಶ್ರೂಷಕರ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಆಯುಷ್ ಇಲಾಖೆಯಲ್ಲಿನ ಶುಶ್ರೂಷಕರ 90 (50+36 ಹೈ.ಕ.) ಹುದ್ದೆಗಳ ಸೆಪ್ಟೆಂಬರ್ 23 ರಂದು ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲ ತಾಣ http://kpsc.kar.nic.in ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಹೆಚ್‍ಕೆ::ಜಿಪಿಆರ್.